ಕರ್ನಾಟಕ ಸರ್ಕಾರ

ಸಂ:ಗ್ರಾಅಪ/5/ಗ್ರಾನೀಸ(6)2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:14.07.2014

ಸುತ್ತೋಲೆ

ವಿಷಯ : ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅಬಕಾರಿ ಶುಲ್ಕ ವಿನಾಯಿತಿ ಪಡೆಯುವ ಕುರಿತು.

ಉಲ್ಲೇಖ : ದಿನಾಂಕ:04.09.2013 ರಂದು ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಸಭೆಗೆ ನೀಡಿದ ವರದಿ.

ಭಾರತ ಸರ್ಕಾರವು ಕೇಂದ್ರ ಅಬಕಾರಿ ಸುಂಕದ ಪೂರ್ಣ ವಿನಾಯಿತಿಯನ್ನು, ಈ ಕೆಳಕಂಡ 3 ವಸ್ತುಗಳಿಗೆ ನೀಡಲು ಅಧಿಸೂಚನೆ **ಸಂಖ್ಯೆ:6/2006-Central Excise, ದಿನಾಂಕ:01.03.2006**ರಲ್ಲಿ ನೀಡಿದೆ.

1. Parts of hand pumps.
2. All items of machinery, including instruments, apparatus and appliances, auxiliary equipment and their components/parts required for setting up of water treatment plants;
3. Pipes needed for delivery of water from its source to the plant and from there to the storage facility:

Explanation:- For the purpose of this exemption, water treatment plants includes a plant for desalination, demineralization or purification of water or for carrying out any similar process or processes intended to make the water fit for human or animal consumption, but does not include a plant supplying water for industrial purpose.

If, a certificate issued by the Collector/District Magistrate/Deputy Commissioner of the District in which the plant is located, is produced to the Deputy Commissioner of Central Excise or the Assistant Commissioner of Central Excise, as the case may be, having jurisdiction, to the effect that such goods are cleared for the intended use specified in column (3) of the Table.

ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ, ಅದರ ಸಾಮಗ್ರಿ ಖರೀದಿಯಲ್ಲಿ ಕೇಂದ್ರ ಅಬಕಾರಿ ಶುಲ್ಕ ವಿನಾಯತಿ ಪಡೆಯಲಾಗುತ್ತಿಲ್ಲವೆಂಬುದನ್ನು ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಸಮಿತಿಯು ಗಂಭೀರವಾಗಿ ಪರಿಗಣಿಸಿತು. ಇದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಆದ್ದರಿಂದ **ಇನ್ನು ಮುಂದೆ ಅಬಕಾರಿ ಶುಲ್ಕ ವಿನಾಯಿತಿ**

ಸಂಬಂಧ ಆಯಾ ಜಿಲ್ಲಾಧಿಕಾರಿಗಳ ಮುಖೇನ ವ್ಯವಹರಿಸಿ ಆಯಾ ಅನುಮೋದಿತ ಗುತ್ತಿಗೆದಾರರಿಗೆ ನಿಯಮಾನುಸಾರ ಪರವಾನಿಗೆ ನೀಡಲು ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಕ್ರಮವಹಿಸಬೇಕು.

ಅಂತೆಯೇ ಅಂದಾಜು **ಪಟ್ಟಿಯನ್ನು ಆಯಾ ಸಾಲಿನ ಅನುಮೋದಿತ S.R. ದರಗಳನ್ವಯ ಸದರಿ ಕೇಂದ್ರ ಅಬಕಾರಿ ಶುಲ್ಕವನ್ನು ಹೊರತುಪಡಿಸಿ ಅಂದಾಜು ಪಟ್ಟಿ ತಯಾರಿಸಬೇಕು. S.R. ದರದಲ್ಲಿ ಸದರಿ ಶುಲ್ಕವನ್ನು ಅಳವಡಿಸಿ, ಅಂದಾಜು ದರದಲ್ಲಿ ವಿನಾಯಿತಿ ನೀಡಿ ಅದನ್ನು ಸರ್ಕಾರಕ್ಕೆ ಜಮೆ ಮಾಡದೇ ತೆರಿಗೆ ವಂಚಿಸಲು ಅವಕಾಶ ಕಲ್ಪಿಸಬಾರದು.**

ಇಂತಹ ಪ್ರಕರಣಗಳು ಕಂಡು ಬಂದಲ್ಲಿ, ಆಯಾ PRED ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ವ್ಯತ್ಯಯಕ್ಕೆ ನೇರವಾಗಿ ಜವಾಬ್ದಾರರಾಗುತ್ತಾರೆ.

17/7

(ಟಿ.ಎಂ.ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, **ಬೆಂಗಳೂರು-09**.
2. ರಾಜ್ಯದ ಎಲ್ಲಾ (30) ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಎಲ್ಲಾ (38) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರು.